**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 9/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 9**

**ದಿನಾಂಕಃ** 03.08.2026 **ಸಿಡಬ್ಲ್ಯೂ 9**

| | |
|---|---|
| ಹೆಸರು | ಸುದೀಪ |
| ತಂದೆಯ ಹೆಸರು | ಹನುಮಂತಪ್ಪ |
| ವಯಸ್ಸು | 25 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ.8 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನುಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನನಗೆ ಪರಿಚಯ ಇರುವ ನಮ್ಮ ಕಾಲೋನಿಯ ನಮ್ಮ ಜನಾಂಗದ ಪ್ರವೀಣ ಮತ್ತು ಹರಿಹರ ತಾ. ಬನ್ನಿಕೋಡು ಗ್ರಾಮದ ಅನಿಲಕುಮಾರ ದಂಡೆಪ್ಪ ಇವರು ಸುಮಾರು 1 ವರೆ ತಿಂಗಳ ಹಿಂದೆ ಒಂದು ದಿನ ಒನ್ ಪ್ಲಸ್ ನಾರ್ಡ ಸಿಇ ಟುಲೈಟ್ 5 ಜಿ ಮೊಬೈಲನ್ನು ನನಗೆ ಕೊಟ್ಟು ಇದು ನಮ್ಮ ಮೊಬೈಲ್ ಇದನ್ನು ಇಟ್ಟುಕೊಂಡು ರೂ.5000/- ಕೊಡು ಸ್ವಲ್ಪ ದಿನ ಬಿಟ್ಟು ಮೊಬೈಲ್ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದಾಗ ನನ್ನ ಬಳಿ ದುಡ್ಡು ಇಲ್ಲ , ಬೇರೆ ಎಲ್ಲಾದರೂ ನೋಡಿ ಎಂದು ತಿಳಿಸಿದ್ದು, ಆದರೂ ಸಹ ಅವರು ಮೊಬೈಲ್ ಕೊಟ್ಟು ದುಡ್ಡು ಕೊಡುವಂತೆ ಒತ್ತಾಯ ಮಾಡಿದ್ದರಿಂದ ನಾನು ಮೊಬೈಲನ್ನು ಹರಿಹರದ ಸಂತು ಕಮ್ಯುನಿಕೇಷನನಲ್ಲಿ ಕೆಲಸ ಮಾಡುವ ನನಗೆ ಪರಿಚಯ ಇರುವ ಶ್ರೀಕಾಂತನ ಬಳಿ ತೆಗೆದುಕೊಂಡು ಹೋಗಿ ರೂ.5000/- ವನ್ನು ಕೊಡು ಎಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ಶ್ರೀಕಾಂತನ ಮೊಬೈಲ್ ಇಟ್ಟುಕೊಂಡು ರೂ.5000/- ಹಣ ಕೊಟ್ಟಿದ್ದು ಹಣವನ್ನು ಪ್ರವೀಣನಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಹರಿಹರ ಪೋಲೀಸ್ ಠಾಣೆಗೆ ಬಂದಾಗ ಮೊಬೈಲನ್ನು ತೋರಿಸಿ ವಿಚಾರಿಸಿದಾಗ ನಾನು ಮಾಹಿತಿಯನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪ್ರವೀಣ ಮತ್ತು ಅನಿಲಕುಮಾರ ಒಂದುವರೆ ತಿಂಗಳ ಹಿಂದೆ ಒಂದು ದಿನ ರಾತ್ರಿ 10.30 ಗಂಟೆ ಸಮಯದಲ್ಲಿ ಪ್ರವೀಣನ ಮೋಟಾರ್ ಸೈಕಲ್ ಕೆಎ-17 ಹೆಚ್ ಎಂ -5933 ನೇ ಬೈಕಿನಲ್ಲಿ ಇಬ್ಬರು ಎನ್ ಹೆಚ್ -48 ಬೈಪಾಸ್

ರಸ್ತೆಯಲ್ಲಿ ಹರಿಹರ ಶಿವಮೊಗ್ಗ ರಸ್ತೆಯಲ್ಲಿ ಹನಗವಾಡಿ ಗ್ರಾಮದ ಹತ್ತಿರ ಕಾರ್ತಿಕ ಎಂಬುವರು ಮೊಬೈಲ್ ಹಿಡಿದುಕೊಂಡು ಹೋಗುತ್ತಿರುವಾಗ ಆರೋಪಿತರು ಅದನು ಕಸಿದುಕೊಂಡು ಓಡಿಹೋಗಿರುತ್ತಾರೆ, ನಂತರ ಅದನ್ನು ನನ್ನ ಬಳಿ ಇಟ್ಟು ನಾನು ಶ್ರೀಕಾಂತನಿಂದ ಹಣ ಪಡೆದುಕೊಂಡು ಹಣ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.23 ಎಂದು ಗುರುತಿಸಲಾಯಿತು. ನಿಪಿ.23 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರು ನನ್ನ ಸ್ನೇಹಿತರಾಗಿದ್ದರಿದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರಿಂದಃ ಇರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.